ಸಾಕ್ಷಿಯನ್ನು ದಿನಾಂಕಃ06.08.2019 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿ 2, 7 ,8 10 ,11 ರವರ ಪರ ಶ್ರೀ ಪಿಎನ್‌ಕೆ ವಕೀಲರಿಂದ.**

ನನ್ನ ತಂದೆಯ ಮರಣಾನಂತರ ನಮ್ಮ ಕುಟುಂಬದ ಆರ್ಥಿಕ ಪರಿಸ್ಥಿತಿ ಚೆನ್ನಾಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಬದುಕಿದ್ದ ಕಾಲಕ್ಕೆ ಅವರ ಆದಾಯದಿಂದಲೇ ಕುಟುಂಬದ ನಿರ್ವಹಣೆ ಮಾಡಲಾಗುತ್ತಿತ್ತು ಎಂದರೆ ಸಾಕ್ಷಿ ನಾವು ಸಹ ಕೆಲಸ ಮಾಡುತ್ತಿದ್ದೇವು ಎಂದು ನುಡಿಯುತ್ತಾರೆ. ಹಾಲಿ ನನ್ನ ವಯಸ್ಸು 48 ವರ್ಷ. 1969 ಮತ್ತು 1987, 1988 ರಲ್ಲಿ ನನ್ನ ತಂದೆ ಮಾಡಿದ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಆ ಸಮಯದಲ್ಲಿ ಮನೆಯ ವ್ಯವಹಾರ ನೋಡಿಕೊಳ್ಳುತ್ತಿದ್ದ ಕಾರಣ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾನು ಜಿಲ್ಲಾ ನ್ಯಾಯಾಲಯ ತುಮಕೂರು ಇಲ್ಲಿ ಪ್ರೋಬೇಟ್ ಆದೇಶವನ್ನು ತಡೆ ಹಿಡಿಯುವಂತೆ ಸಲ್ಲಿಸಿದ ಅರ್ಜಿ ಸಂಖ್ಯೆ 175/2017 ವಜಾಗೊಂಡಿದೆ ಎಂದರೆ ಸಾಕ್ಷಿ ಇಂದು ಆದೇಶಕ್ಕೆ ಇಡಲಾಗಿದೆ ಎಂದು ನುಡಿಯುತ್ತಾರೆ.

**ಓ.ಎಸ್. 135/2012**
**ಪಿಡಬ್ಲ್ಯೂ-1**

ದಿಃ24.02.2006 ರಂದು ನನ್ನ ತಂದೆ ತನ್ನ ಸ್ವಯಾರ್ಜಿತ ಆಸ್ತಿಗಳನ್ನು ವಿಲ್ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ವಯಸ್ಸಾದ ಕಾಲಕ್ಕೆ ಆತನನ್ನು ಪ್ರೀತಿ ವಿಶ್ವಾಸದಿಂದ ನೋಡಿಕೊಂಡಿದ್ದ ತನ್ನ ಮೂರು ಮಕ್ಕಳ ಹೆಸರಿಗೆ ವಿಲ್ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಲ್‌ನ ಆದಾರದಮೇಲೆ ಮೂರು ಜನ ಮಕ್ಕಳು ಪಿ ಮತ್ತು ಎಸ್ಸಿ ನಂಬರ್ 68/2012 ರಂತೆ ಪ್ರೋಬೇಟ್ ಪಡೆದು ತಮ್ಮ ಹೆಸರಿಗೆ ದಾಖಲೆ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳಿಗೆ ಮೂರು ಜನ ಮಾತ್ರ ಹಕ್ಕುದಾರರು ನನಗೆ ಯಾವುದೇ ಭಾಗಂಶ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಸಹೋದರರ ಮೇಲಿನ ದ್ವೇಷದ ಕಾರಣ ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ
ಕುಣಿಗಲ್.